# ಬಿ.ಬಿ.ಇಮ್ಮಡಿ ಸರ್ಕಾರಿ ಪ್ರೌಢಶಾಲೆ ಬಳ್ಳಿಗೇರಿ

## ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ-2018

## **ವಿಷಯ : ಸಮಾಜ ವಿಜ್ಞಾನ**

**ಪರಮಾವಧಿ ಅಂಕಗಳು** : 80 **ಸಂಕೇತ ಸಂಖ್ಯೆ** : 85-**K**

**ಒಟ್ಟು ಪ್ರಶ್ನೆಗಳ ಸಂಖ್ಯೆ** : 47 **ಒಟ್ಟು ಪುಟಗಳ ಸಂಖ್ಯೆ**: 03

| | |
|---|---|
| | ಸೂಚನೆಗಳು: |
| 1 | ಹೊಂದಿಸಿ ಬರೆಯಿರಿ ಪ್ರಶ್ನೆಯ ಉಪಪ್ರಶ್ನೆಗಳನ್ನು ಒಳಗೊಂಡಂತೆ ಒಟ್ಟು 47 ಪ್ರಶ್ನೆಗಳನ್ನು ಹೊಂದಿರುತ್ತದೆ. |
| 2 | ಬಹು ಆಯ್ಕೆ, ಹೊಂದಿಸಿ ಬರೆಯುವ ಪ್ರಶ್ನೆಗಳ ಉತ್ತರಗಳನ್ನು ತಿದ್ದಿ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ. |
| 3 | 15 ನಿಮಿಷಗಳನ್ನು ಪ್ರಶ್ನೆಪತ್ರಿಕೆ ಓದಲು ಕೊಡಲಾಗಿದೆ. ಒಟ್ಟು 3 ಗಂಟೆ 15 ನಿಮಿಷ ಸಮಯಾವಕಾಶವಿರುತ್ತದೆ. |

**ಪ್ರಶ್ನೆ I ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** 1 **X** 10=10

1) ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್

(A) ಲಾರ್ಡ್ ಕರ್ಜನ್ (B)ಲಾರ್ಡ್ ಡಾಲ್ ಹೌಸಿ (C) ಲಾರ್ಡ್ ವೆಲ್ಲೆಸ್ಲಿ (D)ಲಾರ್ಡ್ ಕಾರನ್ ವಾಲಿಸ್

2) A ಪಟ್ಟಿಯಲ್ಲಿ ನಾಯಕರು ಮತ್ತು B ಪಟ್ಟಿಯಲ್ಲಿರುವ ಅವರಿಗೆ ಸಂಬಂಧಪಟ್ಟ ವಿಷಯಗಳನ್ನು ನೀಡಲಾಗಿದೆ. ಅವುಗಳಿಗೆ ಸರಿ ಹೊಂದುವ ಗುಂಪನ್ನು ಗುರುತಿಸಿರಿ.

| A | B | |
|---|---|---|
| 1) ವಲ್ಲಭಬಾಯಿ ಪಟೇಲ | I) ಮೊದಲ ಗವರ್ನರ್ ಜನರಲ್ | A) 1-III, 2-II, 3-IV, 4-I |
| 2) ಜವಾಹರಲಾಲ್ ನೆಹರು | II) ಮೊದಲ ರಾಷ್ಟ್ರಪತಿ | B) 1-II, 2-IV, 3-I, 4-III |
| 3) ರಾಜಗೋಪಾಲಚಾರಿ | III) ಮೊದಲ ಗೃಹಮಂತ್ರಿ | C) 1-III, 2-IV, 3-I, 4-II |
| 4) ಬಾಬು ರಾಜೇಂದ್ರ ಪ್ರಸಾದ | Iv)ಮೊದಲ ಪ್ರಧಾನಮಂತ್ರಿ | D)1-IV, 2-II, 3-III, 4-I |

3) ಭಾರತ ಚೀನಾ ದೇಶಗಳ ಸಂಬಂಧವು ಈ ತತ್ವಗಳ ಮೇಲೆ ಅವಲಂಬಿತವಾಗಿದೆ.


(A) ಕಮ್ಯುನಿಸ್ಟ್ ಮತ್ತು ಹಿಂದು ತತ್ವ (B)ಆರ್ಥಿಕ ಮತ್ತು ರಾಜಕೀಯ ತತ್ವ

(C) ಪಂಚಶೀಲ ಮತ್ತು ಹಿಂದೂ-ಚೀನಿ ಭಾಯಿ ಭಾಯಿ ತತ್ವ (D)ಪ್ರಜಾಪ್ರಭುತ್ವ ಮತ್ತು ಸಮಾನತೆಯ ತತ್ವ

4) ವಿಶ್ವಸಂಸ್ಥೆಯ ಈ ಅಂಗ ಸಂಸ್ಥೆಯು ತನ್ನ ಸೇವೆಗಾಗಿ ನೋಬೆಲ್ ಪ್ರಶಸ್ತಿ ಪಡೆದಿದೆ.

(A) ಕಾಮನ್ ವೆಲ್ತ್ ಸಂಸ್ಥೆ (B)ಯುನೆಸ್ಕೋ (C) ಯುನಿಸೆಫ್ (D) ಸಾರ್ಕ್

5) ಈ ಕೆಳಗಿನ ನಕ್ಷೆಯಲ್ಲಿ ಗುರುತಿಸಿರುವ ಸ್ಥಳಗಳ ಸರಿಯಾದ ಹೊಂದಾಣಿಕೆಯನ್ನು ಗುರುತಿಸಿ ಬರೆಯಿರಿ.




(A) 1-ತುಂಗಭದ್ರಾ, 2-ಕೋಸಿ, 3-ಗಂಗಾ, 4-ನರ್ಮದಾ

(B) 1-ನರ್ಮದಾ, 2-ಕೋಸಿ, 3-ತುಂಗಭದ್ರಾ, 4-ನರ್ಮದಾ

(C) 1-ಕೋಸಿ, 2-ತುಂಗಭದ್ರಾ, 3-ಗಂಗಾ, 4-ನರ್ಮದಾ

(D) 1-ಕೋಸಿ, 2-ಗಂಗಾ, 3-ನರ್ಮದಾ, 4-ತುಂಗಭದ್ರಾ

6) "ಮಾನವ ಕುಲ ತಾನೊಂದೇ ವಲಂ" ಎಂದವರು.

(A) ಗಾಂಧೀಜಿ (B) ಅಂಬೇಡ್ಕರ್ (C) ರನ್ನ (D) ಪಂಪ

7) ಸರಕಾರದ ಪ್ರಮುಖ ಆಧಾಯದ ಮೂಲ.

(A) ಸಾಲ (B) ದಂಡ (C) ತೆರಿಗೆ (D) ಶುಲ್ಕ

8) ಭಾರತದ ಕೆಲವು ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ಮಳೆ ಬೀಳಲು ಕಾರಣ.

(A) ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹ.

(B) ನೈರುತ್ಯ ಮಾನ್ಸೂನ ಮಾರುತಗಳ ಆಗಮನ.

(C) ಉಷ್ಣಾಂಶವು ಕಡಿಮೆಯಾಗಿ ಒತ್ತಡವು ಹೆಚ್ಚಾಗುತ್ತದೆ.

(D) ಒತ್ತಡವು ಕಡಿಮೆಯಾಗಿ ಉಷ್ಣಾಂಶವು ಹೆಚ್ಚಾಗುತ್ತದೆ.

9) ಇನ್ ಫೋಸಿಸ್ ಕಂಪನಿ ಹುಟ್ಟು ಹಾಕಿದವರು.

(A) ನಾರಾಯಣ ಮೂರ್ತಿ (B) ಧೀರುಭಾಯಿ ಅಂಬಾನಿ (C) ಅಜೀಂ ಪ್ರೇಮ್ ಜಿ (D) ಪ್ರತಾಪ ರೆಡ್ಡಿ

10) ಈ ಖಾತೆಗೆ ಬ್ಯಾಂಕುಗಳು ಸಾಮಾನ್ಯವಾಗಿ ಯಾವುದೇ ಬಡ್ಡಿಯನ್ನು ಕೊಡುವುದಿಲ್ಲ. ಬದಲಾಗಿ ಖಾತೆದಾರನಿಂದಲೇ ಸೇವಾಶುಲ್ಕವನ್ನು ಪಡೆಯುತ್ತವೆ.

(A) ಉಳಿತಾಯ ಖಾತೆ (B) ಚಾಲ್ತಿ ಖಾತೆ (C) ನಿಶ್ಚಿತ ಠೇವಣಿ ಖಾತೆ (D) ಆವರ್ತ ಠೇವಣಿ ಖಾತೆ

**ಪ್ರಶ್ನೆ II ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರವನ್ನು ಬರೆಯಿರಿ. 1 X 14=14**

11) ಸಾರ್ಕ್ ಸಂಸ್ಥೆಯ ಪ್ರಗತಿಗೆ ತೊಡಕಾಗಿರುವ ಅಂಶ ಯಾವುದು ?

12) ಮೌಖಿಕ ಚರಿತ್ರೆ ಎಂದರೇನು ?

13) ಅಮೇರಿಕಾ ದ್ವಿತೀಯ ಮಹಾಯುದ್ಧ ಪ್ರವೇಶಿಸಿತು. ಏಕೆ ?

14) ಕೋಮುವಾದ ಎಂದರೇನು ?

15) ಭಾರತ ಸದಸ್ಯ ಸ್ಥಾನ ಹೊಂದಿರದಿದ್ದರೂ ಯಾವ ಸಂಸ್ಥೆಯ ಬಗ್ಗೆ ಉದಾರ ನೀತಿ ಮತ್ತು ವೀಕ್ಷಕರ ಸ್ಥಾನ ಹೊಂದಿದೆ ?

16) ಹೆಣ್ಣು ಭ್ರೂಣ ಹತ್ಯೆ ಎಂದರೇನು ?

17) ಕೂಲಿ ಕೆಲಸ ಮಾಡುವ ಮಗುವನ್ನು ಶಾಲೆಗೆ ಸೇರಿಸಲು ಇರುವ ಸರಕಾರದ ಯೋಜನೆ ಯಾವುದು ?

18) ಭಾರತದ ಪ್ರಮುಖ ನಾರಿನ ಬೆಳೆಗಳಾವುವು ?

19) ಸುವರ್ಣ ಕ್ರಾಂತಿ ಎಂದರೇನು ?

20) ಅಲ್ಯುಮಿನಿಯಂನ್ನು 20 ನೇ ಶತಮಾನದ ಅದ್ಭುತ ಲೋಹವೆಂದು ಕರೆಯಲು ಕಾರಣವೇನು ?

21) ಮುಂಬಯಿಯನ್ನು ಭಾರತದ ಮ್ಯಾಂಚೆಸ್ಟರ್ ಎನ್ನಲು ಕಾರಣವೇನು ?

22) HDI ಇದನ್ನು ವಿಸ್ತರಿಸಿ ಬರೆಯಿರಿ.

23) ತಲಾ ಆದಾಯವನ್ನು ಹೇಗೆ ಪಡೆಯಬಹುದು ?

24) ಬಿಳಿ ಕ್ರಾಂತಿಯ ಪಿತಾಮಹ ಯಾರು ?

**ಪ್ರಶ್ನೆ III ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 2 X 15=30**

25) "ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ" ಈ ಹೇಳಿಕೆಯನ್ನು ಸಮರ್ಥಿಸಿರಿ.

26) ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳೇನು ?

27) ಭಾರತೀಯ ಸಮಾಜಕ್ಕೆ ಬ್ರಹ್ಮ ಸಮಾಜ ನೀಡಿದ ಕೊಡುಗೆಗಳೇನು ?

28) ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳಾವುವು? ಅಥವಾ

2 ನೇ ಮಹಾಯುದ್ಧದ ಪರಿಣಾಮಗಳಾವುವು ?

29) ಅನಕ್ಷರತೆಯನ್ನು ಹೋಗಲಾಡಿಸಲು ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

30) ಪ್ರಚಲಿತ ಜಗತ್ತಿಗೆ ನಿಶ್ಶಸ್ತ್ರೀಕರಣ ಅತಿ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ ? ವಿವರಿಸಿರಿ.

31) ಪರಿಸರ ಸಂರಕ್ಷಣೆಗಾಗಿ ನಡೆದಂತ ಕೆಲವು ಚಳುವಳಿಗಳನ್ನು ಹೆಸರಿಸಿರಿ.

32) ಪೂರ್ವ ಮತ್ತು ಪಶ್ಚಿಮ ಘಟ್ಟಗಳಿಗೆ ಇರುವ ವ್ಯತ್ಯಾಸಗಳೇನು ?

33) ಮಣ್ಣಿನ ಸವೆತವನ್ನು ತಡೆಗಟ್ಟುವ ಕ್ರಮಗಳಾವುವು?

34) ಅರಣ್ಯ ನಾಶಕ್ಕೆ ಮುಖ್ಯ ಕಾರಣಗಳೇನು ?

35) "ಮಾನವನ ಜೀವನದಲ್ಲಿ ಸಂಪರ್ಕ ಸಾಧನಗಳ ಕೊಡುಗೆ ಅಪಾರ" ಸಮರ್ಥಿಸಿರಿ.

36) ಪ್ರಾಕೃತಿಕ ವಿನಾಶಕಾರಕಗಳು ಯಾವುವು ?

37) ಗ್ರಾಮೀಣ ಪ್ರದೇಶದ ಜನರು ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ನೀವು ಯಾವ ಕ್ರಮಗಳನ್ನು ಸೂಚಿಸುವಿರಿ?

38) ಪಂಚವಾರ್ಷಿಕ ಯೋಜನೆಗಳ ಮೂಲ ಉದ್ದೇಶಗಳೇನು ?

39) "ಜಾಗತೀಕರಣವು ನಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡುತ್ತದೆ" ಸಮರ್ಥಿಸಿರಿ.

**ಪ್ರಶ್ನೆ IV ಈ ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ. 3 X 6=18**

40) "1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ನಿರೀಕ್ಷಿತ ಯಶಸ್ಸನ್ನು ತರಲಿಲ್ಲ" ಸಮರ್ಥಿಸಿರಿ. ಅಥವಾ
"ಭಾರತದಲ್ಲಿ ನವ ಜಾಗೃತಿಯ ಉದಯಕ್ಕೆ ಶಿಕ್ಷಣವು ಪ್ರಮುಖ ಪಾತ್ರ ವಹಿಸಿತು" ಸಮರ್ಥಿಸಿರಿ.

41) ಭಾರತ ಪಾಕಿಸ್ತಾನ ದೇಶಗಳ ನಡುವಿನ ಸಂಬಂಧವನ್ನು ವಿವರಿಸಿರಿ. ಅಥವಾ
ಪಂಚಶೀಲ ತತ್ವಗಳಾವುವು?

42) ಅಸ್ಪೃಶ್ಯತೆ ನಿವಾರಣೆಗೆ ತೆಗೆದುಕೊಂಡಿರುವ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು? ಅಥವಾ
ಭಾರತದಲ್ಲಿನ ನಿರುದ್ಯೋಗ ಸಮಸ್ಯೆಗೆ ಕಾರಣಗಳಾವುವು?

43) ಕಾರಿಡಾರ್ ರಸ್ತೆಗಳಿಂದ ದೇಶಕ್ಕಾಗುವ ಪ್ರಯೋಜನಗಳಾವುವು? ಅಥವಾ
ಸ್ವತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ಸ್ಥಾಪನೆಯಾದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಹೆಸರಿಸಿ.

44) ಬಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ ? ಅಥವಾ
ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸಿನ ನಡುವಿನ ಭಿನ್ನತೆಗಳನ್ನು ವಿವರಿಸಿ

45) ಜೀವವಿಮೆ ಮತ್ತು ಸಾಮಾನ್ಯ ವಿಮೆ ನಡುವೆ ಇರುವ ವ್ಯತ್ಯಾಸಗಳಾವುವು ? ಅಥವಾ
ಬ್ಯಾಂಕಿನಲ್ಲಿ ಖಾತೆ ತೆರೆಯಲು ಯಾವ ವಿಧಾನಗಳನ್ನು ಅನುಸರಿಸಬೇಕು ?

**ಪ್ರಶ್ನೆ V ಈ ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ. 1 X4=4**

46) ಭಾರತ ದೇಶಕ್ಕೆ ಡಾ . ಬಿ .ಆರ್ . ಅಂಬೇಡ್ಕರ್ ರವರ ಕೊಡುಗೆಗಳನ್ನು ವಿವರಿಸಿರಿ .

**ಪ್ರಶ್ನೆ VI ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿರಿ. 1+3=4**

47) a) ಕರ್ಕಾಟಕ ಸಂಕ್ರಾಂತಿ ವೃತ್ತ
b) ಬಾಂಬೆ ಹೈ
c) ಭಾಕ್ರಾ ನಂಗಲ್

ರಾಜಶೇಖರ್ ತಾಂಬೆ ಸಹಶಿಕ್ಷಕರು ಬಿ ಬಿ ಇಮ್ಮಡಿ ಸರಕಾರಿ ಪ್ರೌಢಶಾಲೆ ಬಳ್ಳಿಗೇರಿ , ಅಥಣಿ (ತಾ ), ಚಿಕ್ಕೋಡಿ (ಶೈ-ಜಿಲ್ಲೆ ) ಮೊ :9591564550